ಅರ್ಜಿಗಳನ್ನೊಪ್ಪಿಸುವುದು

ಅಧ್ಯಕ್ಷರು.—ಈಗ ಅರ್ಜಿಗಳನ್ನು ಒಪ್ಪಿಸುವುದು. ಮಾನ್ಯ ಎಂ. ಎಸ್. ಪಾಟೀಲರೇ ತಮ್ಮ ಹೆಸರಿನ ಮುಂದಿರುವ ಅರ್ಜಿಗಳನ್ನ್ನ ಒಪ್ಪಿಸಿ.

ಶ್ರೀ ಎಂ. ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ನಾನು

೧) ದಾದಬನಹಟ್ಟಿ ಗ್ರಾಮದ (ತಾಲ್ಲೂಕು ಹುಕ್ಕೇರಿ) ಗಂಡು ಮಕ್ಕಳ ಶಾಲೆಯಲ್ಲಿ ೫ ರಿಂದ ೭ನೇ ತರಗತಿಗಳನ್ನು ಪ್ರಾರಂಭಿಸುವ ಬಗ್ಗೆ,

೨) ಹತ್ತರಗಿ ಸೆಂಟರ್ (ಆನಂದಪುರ) ಪುನರ್‌ವಸತಿ ಕೇಂದ್ರದಲ್ಲಿ ಪ್ರಾಥಮಿಕ ಆರೋಗ್ಯ ಘಟಕ ಕೇಂದ್ರವನ್ನು ೧೯೮೮-೮೯ನೇ ಸಾಲಿನಲ್ಲಿ ಮಂಜೂರು ಮಾಡುವ ಬಗ್ಗೆ,

೩) ಮಾಸ್ತಿಹೊಳಿ ಹಾಗೂ ಹುನೂರ ಪುನರ್ನಿವೇಶನ ಕೇಂದ್ರಕ್ಕೆ ರಾಷ್ಟ್ರೀಯ ನೀರು ಸರಬರಾಜು ಯೋಜನೆಯನ್ನು ಮಂಜೂರು ಮಾಡುವ ಬಗ್ಗೆ,

೪) ಹಿಡಕಲ್ ಜಲಾಶಯದ ಕುಕಣಿ ಕಾಲುವೆಯ ಯಾತ ನೀರಾವರಿ ಯೋಜನೆಯನ್ನು ೧.೨.೩. ಮತ್ತು ೪ನೇ ಹಂತದಲ್ಲಿ ಪೂರ್ಣ ಮಾಡುವ ಬಗ್ಗೆ,

೫) ಹೂವಿನ ಸೆಂಟರ್ (ಹುಕ್ಕೇರಿ ತಾಲ್ಲೂಕು) ರೈತ ಜನತೆಗೆ ಜಮೀನುಗಳಿಗೆ ಹೋಗಲು ಸೇತುವೆ ಕಟ್ಟಿಸಿಕೊಡುವ ಕುರಿತು ಅಥವಾ ಪರ್ಯಾಯ ಘಟ್ಟ ಯೋಜನೆಯಡಿಯಲ್ಲಿ ಸೇತುವೆ ನಿರ್ಮಾಣ ಮಾಡುವ ಬಗ್ಗೆ

೬) ಮಾನಗಾಂವ್ ಸೆಂಟರ್, ಮಜತಿ ಸೆಂಟರ್, ಹಾನಗಲ್ ಪುನರ್‌ವಸತಿ ಕೇಂದ್ರಗಳಿಗೆ ಬೆಳಗಾಂ ಜಿಲ್ಲೆ ಸ್ಮಶಾನ್ ಭೂಮಿ ಮಂಜೂರು ಮಾಡಿಕೊಡುವ ಬಗ್ಗೆ,

ಸದನಕ್ಕೆ ಅರ್ಜಿಗಳನ್ನು ಒಪ್ಪಿಸುತ್ತೇನೆ.

ಅಧ್ಯಕ್ಷರು.—ಸದನಕ್ಕೆ ಅರ್ಜಿಗಳನ್ನು ಒಪ್ಪಿಸಲಾಯಿತು.

ಈಗ ಎರಡು ಅಡ್ಜರ್ನಮೆಂಟ್ ಮೋಷನ್‌ಗಳು ಬಂದಿವೆ. ಮಾನ್ಯ ವೆಂಕಟಾವಮಯ್ಯನವರೇ ನಿಮ್ಮ ಅಡ್ಜರ್ನಮೆಂಟ್ ಮೋಷನ್‌ನ್ನು ನಾಳೆ ತೆಗೆದುಕೊಳ್ಳೋಣ.

ಶ್ರೀ ಎಂ. ವೀರಪ್ಪ ಮೊಯಿಲಿ.—ಮಾನ್ಯ ಅಧ್ಯಕ್ಷರೇ,

ವರದಿಯನ್ನೊಪ್ಪಿಸುವುದು

ಅಧ್ಯಕ್ಷರು.—ಈಗ ವರದಿಯನ್ನು ಒಪ್ಪಿಸುವುದು. ಮಾನ್ಯ ರಮೇಶ್‌ಕುಮಾರ್‌ರವರೇ ತಾವು ವರದಿಯನ್ನು ಒಪ್ಪಿಸಿ.

ಶ್ರೀ ರಮೇಶ್ ಕುಮಾರ್.—ಮಾನ್ಯ ಅಧ್ಯಕ್ಷರೇ, ನಾನು

೧) ಮೈಸೂರು ಬಣ್ಣ ಮತ್ತು ಅರಗು ಕೆಲಸಗಳ ನಿಗಮದ ಕಾರ್ಯನಿರ್ವಾಹಕ ನಿರ್ದೇಶಕರ ವೇತನ ಆಪಾದನೆಗಳ ಬಗ್ಗೆ ಸಮಿತಿಯ ಮೂರನೆ ವರದಿ ಹಾಗೂ

೨) ಕರ್ನಾಟಕ ರಾಜ್ಯ ಹಣಕಾಸು ನಿಗಮದ ಬಗ್ಗೆ ಸಾರ್ವಜನಿಕ ಉದ್ಯಮಗಳ ಸಮಿತಿ (೬ನೇ ವಿಧಾನಸಭೆ) ವರದಿಯ ಮೇಲೆ ಸರ್ಕಾರದವರು ತೆಗೆದುಕೊಂಡ ಕ್ರಮಗಳ ಸಮಿತಿಯ ಮೂರನೆಯ ವರದಿಯನ್ನು ಸದನಕ್ಕೆ ಒಪ್ಪಿಸುತ್ತೇನೆ.

ಅಧ್ಯಕ್ಷರು.—ವರದಿಗಳನ್ನು ಸದನಕ್ಕೆ ಒಪ್ಪಿಸಲಾಯಿತು. ಈಗ ಮಾನ್ಯ ಫರ್ನಾಂಡೀಸ್‌ರವರು ವರದಿಯನ್ನು ಒಪ್ಪಿಸಬೇಕು.

SRI J. A. FERNANDEZ.—Sir, I present the Fourth Report of the Committee on Papers laid on the Table.

ಅಧ್ಯಕ್ಷರು.—ವರದಿಗಳನ್ನು ಸದನಕ್ಕೆ ಒಪ್ಪಿಸಲಾಯಿತು.